Akashvani : Bangalore
National Bulletin In Kannada
08.03.2025 : 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

******

ಮುಖ್ಯಾಂಶಗಳು :

- ಜಗತ್ತಿನಾದ್ಯಂತ ಇಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ; ನವದೆಹಲಿಯಲ್ಲಿ ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು
- ಗುಜರಾತ್‌ನಲ್ಲಿಂದು ಲಖ್‌ಪತಿ ದೀದಿ ಸಮ್ಮೇಳನದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿ; ಸ್ವಸಹಾಯ ಗುಂಪುಗಳ ಎರಡೂವರೆ ಲಕ್ಷ ಮಹಿಳೆಯರಿಗೆ ಆರ್ಥಿಕ ನೆರವು ವಿತರಣೆ
- ಒಂದೇ ಎಪಿಕ್ ಸಂಖ್ಯೆ ಸಮಸ್ಯೆಯನ್ನು ಮುಂದಿನ ಮೂರು ತಿಂಗಳೊಳಗೆ ಪರಿಹರಿಸಲು ಚುನಾವಣಾ ಆಯೋಗ ನಿರ್ಧಾರ
- ರೈಲ್ವೆಯ ಮಹಿಳಾ ಲೋಕೋಪೈಲಟ್‌ಗಳ ಸಂಖ್ಯೆಯಲ್ಲಿ ೫ ಪಟ್ಟು ಹೆಚ್ಚಳ - ರೈಲ್ವೆ ಸಚಿವಾಲಯ
- ಫಿಡೆ ವಿಶ್ವ ಜೂನಿಯರ್ ಚಾಂಪಿಯನ್ ಶಿಪ್ ಚೆಸ್; ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ವೆಂಕಟೇಶ್‌ಗೆ ಪ್ರಶಸ್ತಿ

********

ಇಂದು ಜಗತ್ತಿನಾದ್ಯಂತ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಗುತ್ತಿದೆ. ರಾಷ್ಟ್ರೀಯ, ಜನಾಂಗೀಯ, ಭಾಷಾ, ಸಾಂಸ್ಕೃತಿಕ, ಆರ್ಥಿಕ ಅಥವಾ ರಾಜಕೀಯ ವಲಯಗಳಲ್ಲಿ ಮಹಿಳೆಯರ ಸಾಧನೆಯನ್ನು ಗುರುತಿಸುವ ದಿನ ಇದಾಗಿದೆ. 'ಎಲ್ಲಾ ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗಾಗಿ ಹಕ್ಕುಗಳು, ಸಮಾನತೆ. ಸಬಲೀಕರಣ' ಎಂಬುದು ಈ ಬಾರಿಯ ಮಹಿಳಾ ದಿನದ ಧ್ಯೇಯವಾಕ್ಯವಾಗಿದೆ. ಈ ವಿಷಯದಡಿ ಮಹಿಳೆಯರಿಗೆ ಸಮಾನ ಹಕ್ಕುಗಳು, ಅಧಿಕಾರ ಮತ್ತು ಅವಕಾಶಗಳಿಗೆ ದಾರಿ ಮಾಡಿಕೊಡುವಂತಹ ಸಮಾಜ ನಿರ್ಮಾಣಕ್ಕೆ ಕ್ರಮವಹಿಸಲು ಪ್ರೇರೇಪಿಸುತ್ತದೆ. ನವದೆಹಲಿಯ ವಿಜ್ಞಾನ ಭವನದಲ್ಲಿ ಮಹಿಳಾ ಹಾಗು ಮಕ್ಕಳ ಅಭಿವೃದ್ಧಿ ಸಚಿವಾಲಯ 'ನಾರಿಶಕ್ತಿಯಿಂದ ವಿಕಸಿತ ಭಾರತ' ಎಂಬ ವಿಷಯದ ಕುರಿತು ರಾಷ್ಟ್ರೀಯ ಸಮ್ಮೇಳನ ಆಯೋಜಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಉದ್ಘಾಟನಾ ಸಮಾರಂಭದ ನಂತರ ಉನ್ನತ ಮಟ್ಟದ ಚರ್ಚೆ ನಡೆಯಲಿದೆ.

ಮೂರು ತಾಂತ್ರಿಕ ಅಧಿವೇಶನಗಳನ್ನು ಆಯೋಜಿಸಲಾಗಿದ್ದು, ಈ ಕಾರ್ಯಕ್ರಮ ತಮ್ಮ ತಮ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವಂತಹ ಮಹಿಳೆಯರು ಒಂದೇ ವೇದಿಕೆಯಡಿ ಒಟ್ಟುಗೂಡಲು ಅವಕಾಶ ಒದಗಿಸುತ್ತದೆ. ಈ ವೇಳೆ ಚರ್ಚೆಗಳು, ಪ್ರದರ್ಶನಗಳು ಮತ್ತು ಕಥಾನಕಗಳ ಮೂಲಕ ಪ್ರಗತಿಪರ ಭಾರತವನ್ನು ನಿರ್ಮಿಸಲು ಮಹಿಳೆಯರ ಕೊಡುಗೆಗಳನ್ನು ವಿಶಿಷ್ಟ ಡಿಜಿಟಲ್ ಮಾಧ್ಯಮ ಮತ್ತು ಸಂವಾದಾತ್ಮಕ ವಲಯ ಪ್ರದರ್ಶಿಸಿದೆ.

********

ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಇಂದು ಪ್ರಧಾನಿ ನರೇಂದ್ರ ಮೋದಿ ಗುಜರಾತ್‌ನ ನವಸಾರಿ ಜಿಲ್ಲೆಯ ವನ್ಸಿ-ಬೋರ್ಸಿಯಲ್ಲಿ ಲಖ್‌ಪತಿ ದೀದಿ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಈ ವೇಳೆ ಅವರು, ೨೫ ಸಾವಿರಕ್ಕೂ ಹೆಚ್ಚು ಸ್ವಸಹಾಯ ಗುಂಪುಗಳ ಎರಡೂವರೆ ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ೪೫೦ ಕೋಟಿ ರೂಪಾಯಿ ಆರ್ಥಿಕ ನೆರವು ವಿತರಿಸಲಿದ್ದಾರೆ. ನವಸಾರಿ ವಲ್ಸಾಡ್ ಮತ್ತು ಡಾಂಗ್ ಜಿಲ್ಲೆಗಳ ಒಂದು ಲಕ್ಷಕ್ಕೂ ಹೆಚ್ಚು ಲಖ್‌ಪತಿ ದೀದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

********

ಇಂದಿನ ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಕಾವಾಣಿ ವಿಶೇಷ ರೀತಿಯಲ್ಲಿ ಆಚರಿಸುತ್ತಿದೆ. ಎಲ್ಲಾ ಇಂಗ್ಲಿಷ್ ಹಾಗೂ ಹಿಂದಿ ಸುದ್ದಿಗಳನ್ನು ಮಹಿಳಾ ವಾರ್ತಾ ವಾಚಕಿಯರು ನಿನ್ನೆ ಮಧ್ಯರಾತ್ರಿಯಿಂದಲೇ ಸುದ್ದಿ ವಾಚನವನ್ನು ಆರಂಭಿಸಿದ್ದಾರೆ. ಎಲ್ಲಾ ೪೫ ಮುಖ್ಯ ಹಾಗು ಪ್ರತಿ ಗಂಟೆಯ ಸುದ್ದಿಗಳು ಮತ್ತು ಇಂಗ್ಲಿಷ್, ಹಿಂದಿ ಸುದ್ದಿ ನಿಯತಕಾಲಿಕೆ ಕಾರ್ಯಕ್ರಮಗಳನ್ನು ಮಹಿಳಾ ವಾಚಕಿಯರೇ ಓದಲಿದ್ದಾರೆ. ದೆಹಲಿ ಆಕಾಶವಾಣಿ ಕೇಂದ್ರದಿಂದ ಸುದ್ದಿ ವಿಭಾಗದಲ್ಲಿಂದು ಮಹಿಳೆಯರೇ ಕರ್ತವ್ಯ ನಿರ್ವಹಿಸಲಿದ್ದಾರೆ.

********

ಒಂದೇ ಮತದಾರರ ಫೋಟೋ ಗುರುತಿನ ಚೀಟಿ - ಎಪಿಕ್ ಸಂಖ್ಯೆಗಳ ದಶಕಗಳಿಂದ ಇರುವ ಸಮಸ್ಯೆಯನ್ನು ಮುಂದಿನ ಮೂರು ತಿಂಗಳೊಳಗೆ ಪರಿಹರಿಸುವುದಾಗಿ ಚುನಾವಣಾ ಆಯೋಗ ತಿಳಿಸಿದೆ.

ತಾಂತ್ರಿಕ ತಂಡಗಳು ಮತ್ತು ಸಂಬಂಧಪಟ್ಟ ಸಿಇಒಗಳಲ್ಲಿ ಮುಂದಿನ ಮೂರು ತಿಂಗಳಲ್ಲಿ ವಿವರವಾದ ಚರ್ಚೆಗಳ ನಂತರ ದೀರ್ಘಕಾಲದಿಂದ ಬಾಕಿ ಇರುವ ಈ ಸಮಸ್ಯೆಯನ್ನು ಪರಿಹರಿಸಲು ನಿರ್ಧರಿಸಲಾಗಿದೆ ಎಂದು ಆಯೋಗ ನಿನ್ನೆ ಹೇಳಿಕೆಯಲ್ಲಿ ತಿಳಿಸಿದೆ, ಆ ಮೂಲಕ ಒಂದೇ ಎಪಿಕ್ ಸಂಖ್ಯೆಗಳನ್ನು ಹೊಂದಿರುವ ಅಸ್ತಿತ್ವದಲ್ಲಿರುವ ಮತದಾರರಿಗೆ ವಿಶಿಷ್ಟ ರಾಷ್ಟ್ರೀಯ ಎಪಿಕ್ ಸಂಖ್ಯೆಯನ್ನು ನೀಡುವ ಯೋಜನೆಯಿದೆ. ಒಂದು ಎಪಿಕ್ ಸಂಖ್ಯೆಯ ಹೊರತಾಗಿಯೂ, ಒಂದು ನಿರ್ದಿಷ್ಟ ಮತಗಟ್ಟೆಯ ಮತದಾರರ ಪಟ್ಟಿಗೆ ಸಂಪರ್ಕ ಹೊಂದಿದ ಮತದಾರರು ಆ ಮತಗಟ್ಟೆಯಲ್ಲಿ ಮಾತ್ರ ತಮ್ಮ ಮತ ಚಲಾಯಿಸಬಹುದೇ ಹೊರತು ಬೇರೆಲ್ಲಿಯೂ ಸಾಧ್ಯವಿಲ್ಲ. ೧೦೦ ಕ್ಕೂ ಹೆಚ್ಚು ಮತದಾರರ ವಿಚಾರಣೆಯ ಬಳಿಕ ಒಂದೇ ಎಪಿಕ್ ಸಂಖ್ಯೆಗಳನ್ನು ಹೊಂದಿರುವ ಮತದಾರರು ನಿಜವಾದ ಮತದಾರರು ಎಂದು ಬಹಿರಂಗಗೊಂಡಿದೆ. ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳು ಮತದಾರರ ಪಟ್ಟಿಯ ದತ್ತಾಂಶಗಳನ್ನು ಸ್ವತಂತ್ರವಾಗಿ ನಿರ್ವಹಿಸುತ್ತಿರುವುದರಿಂದ ರಾಜ್ಯಗಳು ಅಥವಾ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದೇ ಸಂಖ್ಯೆಗಳ ಹಂಚಿಕೆಯ ಸಮಸ್ಯೆಯನ್ನು ಪತ್ತೆಹಚ್ಚುವುದು ಕಷ್ಟಸಾಧ್ಯವಾಗಿತ್ತು. ಭಾರತದ ಮತದಾರರ ಪಟ್ಟಿಯು ಜಗತ್ತಿನಾದ್ಯಂತದ ಮತದಾರರ ಅತಿದೊಡ್ಡ ದತ್ತಾಂಶವಾಗಿದ್ದು, ೯೯ ಕೋಟಿಗೂ ಹೆಚ್ಚು ನೋಂದಾಯಿತ ಮತದಾರರನ್ನು ಹೊಂದಿದೆ.

********

ಕಳೆದ ತಿಂಗಳು ಸುಮಾರು ೨೨೫ ಕೋಟಿ ಆಧಾರ್ ದೃಢೀಕರಣ ವಹಿವಾಟುಗಳನ್ನು ನಡೆಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಈ ಕುರಿತು ಹೇಳಿಕೆ ಬಿಡುಗಡೆಗೊಳಿಸಿರುವ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ, ಈ ವರ್ಷದ ಫೆಬ್ರವರಿಯಲ್ಲಿ ಸುಮಾರು ೪೩ ಕೋಟಿ ಇ-ಕೆವೈಸಿ ವಹಿವಾಟುಗಳನ್ನು ನಡೆಸಲಾಗಿದ್ದು, ಇದು ವಾರ್ಷಿಕ ೧೪ ಪ್ರತಿಶತದಷ್ಟು ಬೆಳವಣಿಗೆಯನ್ನು ಸೂಚಿಸುತ್ತದೆ ಎಂದು ತಿಳಿಸಿದೆ. ಈ ವರ್ಷದ ಫೆಬ್ರವರಿ ಅಂತ್ಯದ ವೇಳೆಗೆ, ಒಟ್ಟು ಆಧಾರ್ ದೃಢೀಕರಣ ವಹಿವಾಟುಗಳ ಸಂಖ್ಯೆ ೧೪ ಸಾವಿರ ಕೋಟಿ ದಾಟಿದೆ, ಹಾಗೆಯೇ, ಒಟ್ಟು ಇ-ಕೆವೈಸಿ ವಹಿವಾಟುಗಳು ೨ ಸಾವಿರ ಕೋಟಿ ಮೀರಿದೆ ಎಂದು ಸಚಿವಾಲಯ ಹೇಳಿದೆ. ಕಳೆದ ತಿಂಗಳು ಸುಮಾರು ೧೩ ಕೋಟಿ ಆಧಾರ್ ಮುಖ ದೃಢೀಕರಣ ವಹಿವಾಟುಗಳನ್ನು ನಡೆಸಲಾಗಿರುವುದರಿಂದ, ಆಧಾರ್ ಮುಖ ದೃಢೀಕರಣ ವಹಿವಾಟುಗಳು ಉತ್ತಮ ಆಕರ್ಷಣೆಯನ್ನು ಪಡೆಯುತ್ತಿವೆ. ಇದನ್ನು ಮೊದಲು ಬಿಡುಗಡೆ ಮಾಡಿದಾಗಿನಿಂದ ಮುಖ ದೃಢೀಕರಣ ವಹಿವಾಟು ಸಂಖ್ಯೆಗಳು ೧೧೫ ಕೋಟಿ ದಾಟಿವೆ.

ಆಧಾರ್ ಆಧಾರಿತ ಪರಿಶೀಲನೆಯ ಹೆಚ್ಚುತ್ತಿರುವ ಅಳವಡಿಕೆಯು ಬ್ಯಾಂಕಿಂಗ್, ಹಣಕಾಸು ಮತ್ತು ಇತರ ವಲಯಗಳಲ್ಲಿ ಅದರ ಬೆಳೆಯುತ್ತಿರುವ ಪಾತ್ರವನ್ನು ಒತ್ತಿಹೇಳುತ್ತದೆ, ಇದು ಪ್ರಕ್ರಿಯೆಗಳನ್ನು ಹೆಚ್ಚು ಸುಗಮ, ಸುರಕ್ಷಿತ ಮತ್ತು ಪರಿಣಾಮಕಾರಿಯಾಗಿ ಮಾಡುತ್ತದೆ.

********

ರೈಲ್ವೆಯ ಮಹಿಳಾ ಲೋಕೋ-ಪೈಲಟ್‌ಗಳ ಸಂಖ್ಯೆಯಲ್ಲಿ ಐದು ಪಟ್ಟು ಹೆಚ್ಚಳವಾಗಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಅದರ ಕಠಿಣ ಕಾರ್ಯಾಚರಣೆಯ ಸವಾಲುಗಳಿಂದಾಗಿ ರೈಲ್ವೆ ಪುರುಷ ಪ್ರಾಬಲ್ಯದ ವಲಯವಾಗಿತ್ತು. ಆದಾಗ್ಯೂ, ಈ ವಲಯದಲ್ಲೂ ಮಹಿಳೆಯರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಮಹಿಳೆಯರು ಲೋಕೋ ಪೈಲಟ್‌ಗಳು, ಸ್ಟೇಷನ್ ಮಾಸ್ಟರ್, ಟ್ರ್ಯಾಕ್‌ಮೆನ್, ಸಿಗ್ನಲ್ ನಿರ್ವಹಣೆ, ಗಾರ್ಡ್ ಮತ್ತು ಗ್ಯಾಂಗ್‌ಮೆನ್‌ಗಳಂತಹ ಕ್ಷೇತ್ರಗಳನ್ನು ಸಹ ಪ್ರವೇಶಿಸಿದ್ದಾರೆ. ರೈಲ್ವೆಯಲ್ಲಿ ಪ್ರಸ್ತುತ ಮಹಿಳಾ ಉದ್ಯೋಗಿಗಳ ಸಂಖ್ಯೆ ಒಂದು ಲಕ್ಷಕ್ಕಿಂತ ಹೆಚ್ಚಿದ್ದು, ರೈಲ್ವೆಯ ಒಟ್ಟು ಬಲದ ಸುಮಾರು ೮.೨ ಪ್ರತಿಶತದಷ್ಟಿದೆ. ೨೦೧೪ರಲ್ಲಿ, ೩೭೧ ಮಹಿಳಾ ಲೋಕೋ ಪೈಲಟ್‌ಗಳಿದ್ದರು, ಅದು ಈಗ ೧ ಸಾವಿರದ ೮೨೮ ಕ್ಕೆ ಏರಿದೆ. ಭಾರತದ ಸುರೇಖಾ ಯಾದವ್ ಏಷ್ಯಾದ ಮೊದಲ ಮಹಿಳಾ ಲೋಕೋ ಪೈಲಟ್ ಆಗಿದ್ದಾರೆ

********

ಮಾಂಟೆನೆಗ್ರೊದಲ್ಲಿ ನಿನ್ನೆ ರಾತ್ರಿ ನಡೆದ ಫಿಡೆ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ೨೦೨೫ ಚೆಸ್ ಟೂರ್ನಿಯಲ್ಲಿ ೧೮ ವರ್ಷದ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ಪ್ರಣವ್ ವೆಂಕಟೇಶ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಪ್ರಣವ್ ಅವರು ವಿಶ್ವನಾಥನ್ ಆನಂದ್, ಪೆಂಟಾಲ ಹರಿಕೃಷ್ಣ ಮತ್ತು ಅಭಿಜಿತ್ ಗುಪ್ತಾ ನಂತರ ವಿಶ್ವ ಜೂನಿಯರ್ ಪ್ರಶಸ್ತಿಯನ್ನು ಗೆದ್ದ ನಾಲ್ಕನೇ ಭಾರತೀಯರಾಗಿದ್ದಾರೆ. ಈ ನಡುವೆ ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ಚಿದಂಬರಂ ನಿನ್ನೆ ರಾತ್ರಿ ಜೆಕ್ ಗಣರಾಜ್ಯದಲ್ಲಿ ನಡೆದ ಪ್ರತಿಷ್ಠಿತ ಪ್ರೇಗ್ ಮಾಸ್ಟರ್ಸ್ ಅನ್ನು ಗೆದ್ದಿದ್ದಾರೆ. ಅಂತಿಮ ಸುತ್ತಿನಲ್ಲಿ ಅರವಿಂದ್, ಟರ್ಕಿಯ ಎಡಿಜ್ ಗುರೆಲ್ ವಿರುದ್ಧ ಡ್ರಾ ಸಾಧಿಸಿ ಮೊದಲ ಸ್ಥಾನವನ್ನು ಪಡೆದರು. ವಿಶ್ವದ ೮ನೇ ಶ್ರೇಯಾಂಕಿತ ಆರ್ ಪ್ರಜ್ಞಾನಂದ, ನೆದರ್‌ಲ್ಯಾಂಡ್‌ನ ಗ್ರ್ಯಾಂಡ್‌ಮಾಸ್ಟರ್ ಅನೀಶ್ ಗಿರಿ ಮತ್ತು ಚೀನಾದ ಗ್ರ್ಯಾಂಡ್‌ಮಾಸ್ಟರ್ ವೀ ಯಿ ಅವರ ವಿರುದ್ಧ ಅರವಿಂದ್ ಮುನ್ನಡೆ ಸಾಧಿಸಿದರು. ಈ ಗೆಲುವಿನೊಂದಿಗೆ, ಗ್ರ್ಯಾಂಡ್‌ಮಾಸ್ಟರ್ ಅರವಿಂದ್ ವಿಶ್ವದ ಅಗ್ರ ೧೫ ಚೆಸ್ ಆಟಗಾರರಲ್ಲಿ ಸ್ಥಾನ ಪಡೆದಿದ್ದಾರೆ.

********

ಲಕ್ನೋದಲ್ಲಿ ನಿನ್ನೆ ರಾತ್ರಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಟಿ೨೦ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ದೆಹಲಿ ಕ್ಯಾಪಿಟಲ್ಸ್ ಅನ್ನು ೫ ವಿಕೆಟ್‌ಗಳಿಂದ ಸೋಲಿಸಿದೆ. ಗೆಲುವಿಗಾಗಿ ೧೭೮ ರನ್‌ಗಳನ್ನು ಬೆನ್ನಟ್ಟಿದ ಗುಜರಾತ್ ಜೈಂಟ್ಸ್ ೩ ಎಸೆತಗಳು ಬಾಕಿ ಇರುವಾಗ ಗುರಿಯನ್ನು ತಲುಪಿತು. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್‌ಗಳಿಗೆ ೧೭೭ ರನ್‌ಗಳನ್ನು ಗಳಿಸಿತ್ತು.

********